**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ</u>**

ಸಿ.ಸಿ.ನಂಬರ್ : 7018/2022

ಪಿ.ಡಬ್ಲ್ಯೂ : 6 ಸಿ.ಡಬ್ಲ್ಯೂ 6

| | |
|---|---|
| ಸಾಕ್ಷಿದಾರರ ಹೆಸರು | : ಸಿರಾಜುದ್ದೀನ ಮುಲ್ಲಾ |
| ತಂದೆಯ ಹೆಸರು | : ಬಂದೇನವಾಜ |
| ವಯಸ್ಸು | : 29 ವರ್ಷ |
| ಉದ್ಯೋಗ | : ಚಾಲಕ |
| ವಾಸಸ್ಥಳ | : ದೇವರ ಹಿಪ್ಪರಗಿ |
| ಸಮಯ | : 4.30 |

<u>ಸಾಕ್ಷಿಗೆ ಇಂದು ದಿನಾಂಕಃ 14.11.2025 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ</u>**

ಚಾ ಸಾ 1,4 ರಿಂದ 8 ರವರ ಪರಿಚಯ ಇಲ್ಲ. ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುವುದಿಲ್ಲ. ನಾನು ಅಪಘಾತ ನೋಡಿಲ್ಲ ಮತ್ತು ಯಾರನ್ನು ಆಸ್ಪತ್ರೆಗೆ ಕಳುಹಿಸಿರುವುದಿಲ್ಲ.

<u>(**ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು**).</u>

**<u>ಪಾಟೀಸವಾಲುಃ ಎ.ಪಿ.ಪಿ. ರವರಿಂದಃ</u>**

ದಿನಾಂಕ 27-08-2022 ರಂದು ನಾನು ಪೋಲಿಸರಿಗೆ ನೀಡಿರುವ ಹೇಳಿಕೆ ಏನೆಂದರೆ ದಿನಾಂಕ 25-08-2016 ರಂದು ನಮ್ಮ ತಾಜ ಎಕ್ಸಂಟದಲ್ಲಿ ಕುಳಿತಾಗ ಸಂಜೆ 4.30 ಗಂಟೆಗೆ ಕಾರ ನಂಬರ ಕೆಎ28/ಝಡ 4186 ವಾಹನ ಚಾಲಕ ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಬದಿಯಿಂದ

ಹೋಗುತ್ತಿದ್ದ ಚಾ ಸಾ 4 ರವರಿಗೆ ಹಾಯಿಸಿ ಅಪಘಾತಪಡಿಸಿ ಮುಂದೆ ಹೋಗಿ ನಿಲ್ಲಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಚಾ ಸಾ 4 ರವರ ತಲೆಗೆ, ಬಲಗಾಲಿಗೆ ಗಾಯವಾಗಿದ್ದು ನಂತರ ಗಾಯಾಳುಗಳನ್ನು ವಿಜಯಪುರದ ಆಸ್ಪತ್ರೆಗೆ ಕಳುಹಿಸಿ ಕಾರಿನ ಸಂಖ್ಯೆ ಗೊತ್ತಾಗಿದ್ದು ಚಾಲಕನ ಹೆಸರು ಗೊತ್ತಾಗಿರಲಿಲ್ಲ ಎಂದರೆ ಸರಿಯಲ್ಲ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು.

ದಿ 29–08–22 ರಂದು ಪೋಲಿಸರ ಮುಂದೆ ಅಪಘಾತಪಡಿಸಿದ ಕಾರಿನ ಚಾಲಕನ ಹೆಸರು ಮಲ್ಲಿಕಾರ್ಜುನ ಬಿರಾದಾರ ಎಂದು ಗೊತ್ತಾಗಿದ್ದು ಈ ವಿಷಯವಾಗಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 8 ಎಂದು ಗುರುತಿಸಲಾಯಿತು. ನನಗೆ ನಿಪಿ 7 ಮತ್ತು 8 ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರು ಯಾವುದೇ ಪಾಟೀಸವಾಲು ಇಲ್ಲ ಎಂದಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.